# ಕರ್ನಾಟಕ ವಿಧಾನ ಪರಿಷತ್ತು

| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 267(372) |
| ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.12.2024 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರು ಜಮೀನುಗಳಲ್ಲಿ ಬೆಳೆದ ಮರಗಳ ವಿವರ, ಸಂಖ್ಯೆಯ ಮಾಹಿತಿಯನ್ನು ಆರ್‌ಟಿಸಿ ದಾಖಲೆಗಳಿಗೆ ನಮೂದಿಸುವಲ್ಲಿ ಹಲವು ತೊಡಕುಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ತೊಡಕುಗಳನ್ನು ನಿವಾರಿಸಲು ಸರ್ಕಾರ ತೆಗದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು). | ಸರ್ಕಾರದ ಅಧಿಸೂಚನೆ ಸಂಖ್ಯೆ:RD 02 LGP 2024, ದಿನಾಂಕ:12.03.2024 ರ ಆದೇಶದಂತೆ ನೋಟೀಸು ರಹಿತ ವಹಿವಾಟುಗಳಿಗೆ ಸಂಬಂಧಿಸಿದಂತೆ ಸ್ವಯಂಚಾಲಿತವಾಗಿ ಮ್ಯುಟೇಶನ್ ಅನುಮೋದನೆ (Auto approval of mutation) ಯಾಗುವಂತೆ ಭೂಮಿ ತಂತ್ರಾಂಶದಲ್ಲಿ ಅಗತ್ಯ ತಾಂತ್ರಿಕ ಬದಲಾವಣೆ ಮಾಡಲಾಗಿರುತ್ತದೆ.<br><br>ಪ್ರಸ್ತುತ ರೈತರ ಜಮೀನುಗಳಲ್ಲಿ ಬೆಳೆದ ಮರಗಳ ವಿವರಗಳನ್ನು ಆರ್.ಟಿ.ಸಿ ಯಲ್ಲಿ ನಮೂದಿಸಿರುವ ಸಲುವಾಗಿ RTC Management ತಂತ್ರಾಂಶದಲ್ಲಿ ಅಗತ್ಯ ತಾಂತ್ರಿಕ ಅವಕಾಶ ಕಲ್ಪಿಸಲಾಗಿದ್ದು ಪಹಣಿ ಕಾಲಂ 7 ರಲ್ಲಿ ಮರಗಳ ಹೆಸರನ್ನು ನಮೂದಿಸಬಹುದಾಗಿರುತ್ತದೆ.<br><br>ಉಪವಿಭಾಗಾಧಿಕಾರಿಗಳ ಹಂತದಲ್ಲಿ ಮರಗಳ ಹೆಸರು ನಮೂದು ಬಗ್ಗೆ ಆದೇಶ ಮಾಡಿದ ನಂತರ RTC Management ತಂತ್ರಾಂಶದ ಮೂಲಕ ಹೆಸರು ನಮೂದಿಸಬಹುದಾಗಿರುತ್ತದೆ. ನಂತರ ಭೂಮಿ ತಂತ್ರಾಂಶಕ್ಕೆ ಸದರಿ ದಾಖಲೆಯು ವರ್ಗಾವಣೆಯಾಗುತ್ತದೆ ಹಾಗೂ auto mutation ಮುಖಾಂತರ ಪಹಣಿ ಕಾಲಂ 7 ರಲ್ಲಿ ಮರಗಳ ಹೆಸರು ನಮೂದಾಗುತ್ತದೆ. |
| ಆ) | ಗ್ರಾಮೀಣ ಪ್ರದೇಶ ಹಾಗೂ ಪಟ್ಟಣ, ನಗರ ಪ್ರದೇಶ ಒಳಗೊಂಡ ಕಸಬಾ ಹೋಬಳಿ ವ್ಯಾಪ್ತಿಯ ಜಮೀನುಗಳಲ್ಲಿ ಬೆಳೆದ ಮರಗಳ ಮಾಹಿತಿಯನ್ನು ಆರ್‌ಟಿಸಿ ದಾಖಲೆಗಳಿಗೆ ನಮೂದಿಸುವ ಅಧಿಕಾರವನ್ನು ಯಾರಿಗೆ ನೀಡಲಾಗಿದೆ; (ಈ ಕುರಿತು ಸರ್ಕಾರದ ಆದೇಶ ಪ್ರತಿ ನೀಡುವುದು). | ಪಹಣಿ ಕಾಲಂ 7 ರಲ್ಲಿ ಮರಗಳ ಹೆಸರು ನಮೂದು ಮಾಡಲು ಉಪವಿಭಾಗಾಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. |

| | | |
|---|---|---|
| ಇ) | ಮರ ಕಟಾವಿಗೆ ಅನುಮತಿ ಪಡೆಯಲು ಅನುಸರಿಸುವ ಪ್ರಕ್ರಿಯೆ ಸುದೀರ್ಘವಾಗಿರುವುದರಿಂದ ಸರಳೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರವು, ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ ನಿಯಮ 8(3) ರ ಪ್ರಕಾರ ಅಧಿನಿಯಮಾನುಸಾರವಾಗಿ ಮರಗಳನ್ನು ಕಟಾವಣೆಗೆ ವಿಳಂಬವಿಲ್ಲದೆ ನಿಗಧಪಡಿಸಿದ 90 ದಿನಗಳ ಕಾಲಾವಕಾಶದ ಮಿತಿಯಲ್ಲಿ ನಿಯಮನುಸಾರ ಅನುಮತಿ ನೀಡಲಾಗಿರುತ್ತದೆ ಹಾಗೂ e-felling ತಂತ್ರಾಂಶವನ್ನು ಇಲಾಖೆಯಿಂದ ನಿರ್ಮಿಸಿದ್ದು ಈ ಮೂಲಕ ಮರಗಳ ಕಟಾವಣೆಗೆ ಸರಳೀಕರಣಗೊಳಿಸಿದೆ.<br><br>ಖಾಸಗಿ ಜಾಗದಲ್ಲಿ ಮರಕಟಾವಿಗೆ ಅನುಮತಿ ನೀಡುವ ಪ್ರಕ್ರಿಯೆಯು ಈ ಕಟಾವಣೆ ಹಾಗೂ ಸಕಾಲ ತಂತ್ರಾಂಶದಲ್ಲಿ ನೀಡಲಾಗುತ್ತಿದ್ದು, ಇದರಿಂದ, ಮರಕಡಿತಲೆಗೆ ಸರಳೀಕರಣವಾಗಿದೆ. |
| ಈ) | ರೈತರು ಮರ ಕಟಾವಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ ನಂತರ ಅನುಸರಿಸುವ ಪ್ರಕ್ರಿಯೆಗಳೇನು (ವರ್ಕ್ ಫ್ಲೋ); ಅರ್ಜಿ ಸಲ್ಲಿಸಿದ ನಂತರ ಎಷ್ಟು ದಿನದೊಳಗೆ ಅನುಮತಿ ನೀಡಬೇಕಾಗುತ್ತದೆ; (ವಿವರ ನೀಡುವುದು). | ಅರ್ಜಿದಾರರು ಮರ ಕಡಿತಲೆಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿದ ನಂತರ ಕಡತವನ್ನು ಜಂಟಿ ಸರ್ವೆಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗೆ ಕಳುಹಿಸಲಾಗುತ್ತದೆ. ನಂತರ ಕಂದಾಯ ಅಭಿಪ್ರಾಯ ಕೋರಿ ಕಡತವನ್ನು ಜಿಲ್ಲಾಧಿಕಾರಿ / ಉಪ ವಿಭಾಗಾಧಿಕಾರಿ / ತಹಶೀಲ್ದಾರ್ ಇವರಿಗೆ ಕಳುಹಿಸಿ ಅವರಿಂದ ವರದಿ ಪಡೆದ ನಂತರ ಅಧೀನ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ವರದಿಯನ್ನು ಪಡೆದು ಮರಕಡಿತಲೆಗೆ ಅನುಮತಿ ನೀಡಲಾಗುತ್ತದೆ. |
| ಉ) | ರೈತರು ಮರ ಕಟಾವಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ ನಂತರ ಕಾಲಮಿತಿಯೊಳಗೆ ಅನುಮತಿ ನೀಡದಿದ್ದಲ್ಲಿ, ಅನುಮೋದಿಸಲಾಗಿದೆ ಎಂದು ಪರಿಗಣಿಸಿ (Deemed to be approved) ರೈತರು ಮರ ಕಟಾವು ಮಾಡಿಕೊಳ್ಳಲು ಅನುಮತಿ ನೀಡುವ ಕುರಿತು ಸರ್ಕಾರದ ನಿಲುವೇನು? | ರೈತರು ಮರ ಕಟಾವಿಗೆ ಅನುಮತಿ ಕೋರಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದು ಸರಿಯಿದ್ದಲ್ಲಿ ಮರ ಕಟಾವಿಗೆ ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ.<br><br>ರೈತರು ಮರ ಕಟಾವು ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ (Deemed to be approved) ರ ಕುರಿತಾಗಿ ಅರಣ್ಯ ಇಲಾಖಾ ನಿಯಮಾನುಸಾರ ಅವಕಾಶ ಇರುವುದಿಲ್ಲ. |

ಸಂಖ್ಯೆ: ಅಪಜೀ 32 ಎಫ್‌ಎಸ್ ಡಬ್ಲ್ಯೂ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು